ಮುಂಕುಂಡ್ ಸ್ಟೀಲ್ ಜೊತೆ ಮಾಡಬಹುದು ಎಂದು ನಾವು ರೆಕಮೆಂಡ್ ಮಾಡಿ ಕಳುಹಿಸಿದ್ದೇವೆ. ನಾವು ನಮ್ಮ ನೀತಿಯನ್ನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ ತಾವು ಹೇಳಿದ ಹಾಗೆ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳನ್ನು ಇನ್ನು ನೇಮಕ ಮಾಡದೆ ಇರುವುದರಿಂದ ಆವರು ಮಂತ್ರಿಗಳನ್ನು ನೇಮಕ ಮಾಡಿದ ಕೂಡಲೇ ನಾವು ಇವರ ಬಗ್ಗೆ ಮಾತುಕತೆಯನ್ನು ಪ್ರಾರಂಭ ಮಾಡುತ್ತೇವೆ..

ಬೆಂಗಳೂರು ನಗರ ಪಾಲಿಕೆಗೆ ಖಾಸಗೀ ಜಾಹೀರಾತುದಾರರಿಂದ ಬರುವ ಆದಾಯ.

೧೭೬. ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ).—ಮಾನ್ಯ ವಸತಿ ಮಂತ್ರಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಸಗೀ ಜಾಹೀರಾತುದಾರರು ಎಷ್ಟು ಜನರಿದ್ದಾರೆ?

(ಆ) ವರ್ಷ ಒಂದಕ್ಕೆ ಜಾಹೀರಾತುಗಳಿಂದ ಎಷ್ಟು ಹಣ ಬರುತ್ತದೆ?

(ಇ) ಈ ಹಣವನ್ನು ಜಾಹೀರಾತುದಾರರು ಪೂರ್ಣವಾಗಿ ಸಂದಾಯ ಮಾಡುತ್ತಿದ್ದಾರೆಯೇ?

(ಈ) ಅನುಮತಿ ಇಲ್ಲದೆ ಜಾಹೀರಾತು ಹಾಕಿದ್ದಾರೆಯೇ? ಹಾಗಿದ್ದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

(ಅ) ೪೦ ಮಂದಿ.

(ಆ) ವಾರ್ಷಿಕ ಸರಾಸರಿ ೬,೦೦,೦೦೦–೦೦ ರೂ.ಗಳು.

(ಇ) ಕೆಲವರು ಸಂದಾಯ ಮಾಡುತ್ತಿದ್ದಾರೆ. ಇನ್ನು ಕೆಲವರು ಬಾಕಿ ಉಳಿಸಿಕೊಂಡಿದ್ದಾರೆ.

(ಈ) ಕೆಲವು ಜಾಹೀರಾತುದಾರರು ಮಾತ್ರ. ಇದರ ಬಗ್ಗೆ ಬೆಂಗಳೂರು ಮಹಾನಗರ ಪಾಲಿಕೆಯು, ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಶನ್ ಆಫ್ ಡಿಸ್‌ಫಿಗರ್‌ಮೆಂಟ್) ಕಾಯ್ದೆ ೧೯೮೧ ಹಾಗೂ ಕರ್ನಾಟಕ ಓಪನ್ ಪ್ಲೇಸಸ್ (ಪ್ರಿವೆನ್ಶನ್ ಆಫ್ ಡಿಸ್‌ಫಿಗರ್‌ಮೆಂಟ್) (ತಿದ್ದುಪಡಿ) ಕಾಯ್ದೆ ೧೯೮೩ರ ಪ್ರಕಾರ ಮತ್ತು ಕೆ.ಎಂ.ಸಿ. ಕಾಯ್ದೆ ೧೯೭೬ರ ಪ್ರಕಾರ ಸೂಕ್ತ ಕ್ರಮವನ್ನು ಕೈಗೊಂಡಿದೆ.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೇ ನನಗೆ ಉತ್ತರ ಈಗ ಸಿಕ್ಕಿದೆ.

ಅಧ್ಯಕ್ಷರು.—ನಿಮ್ಮ ಮನಸ್ಸಿನಲ್ಲಿ ಉತ್ತರಗಳು ರೆಡಿಯಾಗಿರಬೇಕಲ್ಲ.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೇ, ಈಗ ಬೆಂಗಳೂರು ಮಹಾನಗರದಲ್ಲಿ ಖಾಸಗೀಯವರು ಜಾಹೀರಾತುಗಳನ್ನು ಏನು ಹಾಕುತ್ತಿದ್ದಾರೆ, ಇವರು ಬಹುತೇಕವಾಗಿ ಅನುಮತಿ ಇಲ್ಲದೆ ಹಾಕುತ್ತಿದ್ದಾರೆ. ಇದರಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಬಹಳ ಹಣ ನಷ್ಟವಾಗುತ್ತಿದೆ. ಆದ್ದರಿಂದ ಇದನ್ನು ಬಹಿರಂಗ ಹರಾಜು ಮಾಡಿದರೆ ಬೆಂಗಳೂರು ಮಹಾನಗರ ಪಾಲಿಕೆಗೆ ಹಣ ಬರುತ್ತದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸುತ್ತಾರೆಯೇ? ಮತ್ತು ಈ ಬಗ್ಗೆ ಸೂಕ್ತ ತಿಳುವಳಿಕೆ ಕೊಡುತ್ತಾರೆಯೇ?

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲವರು ಅನುಮತಿ ಇಲ್ಲದೆ ಜಾಹೀರಾತುಗಳನ್ನು ಹಾಕುತ್ತಿದ್ದಾರೆ. ಆ ಬಗ್ಗೆ ಕ್ರಮ ತೆಗೆದುಕೊಂಡು ಅಜಾಹೀರಾತುಗಳನ್ನು ಕಿತ್ತು ಹಾಕಿ ಎಂದು ನಾನು ಅಧಿಕಾರಿಗಳಿಗೆ ಹೇಳಿದ್ದೇನೆ. ಈ ಮಧ್ಯೆದಲ್ಲಿ ಕೆಲವರು ಕೋರ್ಟಿಗೆ ಹೋಗಿ ತಡೆಯಾಜ್ಞೆಯನ್ನು ಸಹ ತಂದಿದ್ದಾರೆ. ಆ ತಡೆಯಾಜ್ಞೆಯನ್ನು ತೆರವು ಮಾಡಿಸುವುದಕ್ಕೆ ಸಹ ನಾವು ಕ್ರಮ ಕೈಗೊಂಡಿದ್ದೇವೆ.

ಶ್ರೀ ಕೆ. ಲಕ್ಕಣ್ಣ.—ಮಾನ್ಯ ಅಧ್ಯಕ್ಷರೇ ಕೋರ್ಟಿನ ತಡೆಯಾಜ್ಞೆಯನ್ನು ತೆರವು ಮಾಡಿ ಅನಧಿಕೃತವಾಗಿ ಹಾಕಿರುವ ಜಾಹೀರಾತುಗಳನ್ನು ಕಿತ್ತು ಹಾಕಿ ಬಹಿರಂಗ ಹರಾಜು ಮೂಲಕ ಕೊಡಿ ಆಗ ತಮಗೆ ಹೆಚ್ಚು ಹಣ ಬರುತ್ತದೆ. ೪–೫ ಲಕ್ಷ ರೂಪಾಯಿಗಳ ಆದಾಯ ಬರುತ್ತದೆ.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಸದಸ್ಯರು ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ. ಈ ವಿಚಾರದಲ್ಲಿ ನಾನು ಪರಿಶೀಲನೆ ಮಾಡುತ್ತೇನೆ.